

ಡಾ.ವಿನೋದ ಛೆಬ್ಬಿ

ಸ್ವಂತಿಕೆ ಸಬಲವಾಗಿ ಇರದಿದ್ದರೆ ತ್ರಿಕೋನೀರಣದಿಂದ ಏನು ಪರಿಣಾಮವಾಗಬಹುದು?

# 20: ಯಾರೂ ಹೊರತಲ್ಲ!

ತ್ರಿಕೋನೀಕರಣದ ಪ್ರಭಾವ ಕೆಲವೊಮ್ಮೆ ಯಾವ ಮಟ್ಟ ಮುಟ್ಟುತ್ತದೆ ಎಂದರೆ ಎರಡೂ ಕಡೆಯ ಹಿರಿಯರು ಸೇರಿ ತಾವೇ ನಿಂತು ಮಾಡಿದ ಮದುವೆಯನ್ನು ತಾವೇ ಮುರಿಯಲು ಹೊರಟದ್ದೂ ಇದೆ.

ಸಂಪ್ರದಾಯಸ್ಥ ಕುಟುಂಬಗಳ ಹುಡುಗ– ಹುಡುಗಿ ಮುಖ ನೋಡದೆ ಮದುವೆಯಾಗಿದ್ದಾರೆ. ತಕ್ಷಣವೇ ವಿದೇಶಕ್ಕೆ ಹಾರಿ ಎರಡು ವರ್ಷ ಕಾಲ ಅಲ್ಲೇ ಇದ್ದಾರೆ. ಇತ್ತೀಚೆಗೆ ಹುಡುಗಿಯ ಅಮ್ಮ 'ಹೊಸ ಸುದ್ದಿ'ಯ ಕುರಿತು ಮಗಳನ್ನು ಕೇಳಿದಾಗ ಗೊತ್ತಾಗಿದ್ದು ಏನೆಂದರೆ, ದಂಪತಿಯಲ್ಲಿ ಇನ್ನೂ ಸಂಭೋಗವೇ ನಡೆದಿಲ್ಲ! ತಕ್ಷಣವೇ ಸುದ್ದಿ ಹುಡುಗಿಯ ಅಪ್ಪನಿಗೆ ಹೋಗಿ, ಆತ ಮೊದಲ ರಾತ್ರಿ ನವದಂಪತಿಗಳು ಉಪಯೋಗಿಸಿದ ಹಾಸಿಗೆಗೆ ರಕ್ತ ಅಂಟಿರಲಿಲ್ಲ ಎಂದು ತಿಳಿದು ಹೆಂಡತಿಗೆ ಮುಂಚೆ ಯಾಕೆ ಹೇಳಲಿಲ್ಲ ಎಂದು ದಬಾಯಿಸಿದ್ದಾನೆ. ಅಷ್ಟಲ್ಲದೆ ಹುಡುಗ ನಪುಂಸಕನೆಂದು ನಿರ್ಧರಿಸಿ, ತಾನು ಮೋಸಹೋದೆನೆಂಬ ನಿರ್ಧಾರಕ್ಕೆಬಂದು ಹುಡುಗನ ಅಪ್ಪನನ್ನು ತರಾಟೆಗೆ ತೆಗೆದುಕೊಂಡಿದ್ದಾನೆ. ಇಬ್ಬರ ಹಿರಿಯರೂ ದಂಪತಿಯನ್ನು ಈಗಲೇ ಬರಬೇಕೆಂದು ಬುಲಾವ್ ಮಾಡಿದ್ದಾರೆ. ಗಾಬರಿಯಾಗಿ ಧಾವಿಸಿ ಬಂದ ಅವರನ್ನು ನನ್ನೆದುರು ಕೂಡಿಸಿ, 'ಮೇರಾ ದಾಮಾದ್ ಮರದ್ ಹೈ ಯಾ ನಹೀಂ ಆಜಮಾಕೆ ಬತಾಯಿಯೆ ಡಾಕ್ಟರ್ ಸಾಬ್! (ನನ್ನ ಅಳಿಯ ಗಂಡಸು ಹೌದೇ ಎಂದು ಪರೀಕ್ಷೆ ಮಾಡಿ ಹೇಳಿ!)' ಎಂದು ಹುಡುಗಿಯ ಅಪ್ಪ ಹುಡುಗನ ಅಪ್ಪನನ್ನು ದುರುಗುಟ್ಟಿ ನೋಡುತ್ತ ನನ್ನನ್ನು ವಿನಂತಿಸುತ್ತಾನೆ. ಹುಡುಗನ ಅಪ್ಪ? ತನ್ನ ಮಗ ಗಂಡಸಾಗಿರುವುದೇ ನಿಜವಾದರೆ ಈ ಅವಮಾನಕ್ಕೆ ಬದಲಾಗಿ ತಲಾಖ್ ಮಾಡಿಸಿಯೇ ತೀರುತ್ತೇನೆ ಎಂದು ನನ್ನೆದುರೇ ಆವಾಜ್ ಹಾಕುತ್ತಾನೆ. ಇಬ್ಬರೂ ಪರಸ್ಪರ ಹಣಾಹಣಿಗೆ ತಯಾರಾಗಿ ನನ್ನ ನ್ಯಾಯನಿರ್ಣಯಕ್ಕೆ ಕಾಯುತ್ತಾರೆ. ನಾನು ಇಬ್ಬಣವನ್ನು ಹೊರಗೆ ಕಳಿಸಿ, ಹುಡುಗ– ಹುಡುಗಿಯನ್ನು ಮಾತ್ರ ಮಾತಾಡಿಸುವ ಮುನ್ನವೇ ಇಬ್ಬರೂ ಒಕ್ಕೊರಲಿನಿಂದ ಹೇಳುತ್ತಾರೆ: 'ಡಾಕ್ಟರ್, ನಮ್ಮಿಬ್ಬರಲ್ಲಿ ಸಂಭೋಗ ಯಾಕಾಗಿಲ್ಲ ಅಂದರೆ ನಾನು ನನ್ನ ಕೆಲಸದಲ್ಲಿ, ಇವಳು ತನ್ನ ಪರೀಕ್ಷೆಯಲ್ಲಿ ಮಗ್ನರಾಗಿದ್ದೆವು, ಅಷ್ಟೆ– ಅದನ್ನು ಆಮೇಲೆ ನೋಡೋಣ. ಮೊದಲು ನಮಗೆ ನಿಮ್ಮಿಂದ ಭರವಸೆ ಬೇಕು. ನಾವಿಬ್ಬರೂ ಪರಸ್ಪರ ತುಂಬ ಪ್ರೀತಿಸುತ್ತೇವೆ. ನಮಗಿಬ್ಬರಿಗೂ ಇನ್ನೂ ಸಂಭೋಗ ಮಾಡಬೇಕೆಂದು ಮೂಡ್ ಬಂದಿಲ್ಲ. ಸಂಭೋಗ ಆದರೂ ಬಿಟ್ಟರೂ ಅದೇನೂ ಲೆಕ್ಕಕ್ಕಿಲ್ಲ. ಆದರೆ ಮೊದಲು ಹೊರಗೆ ಕುಳಿತ ನಮ್ಮ ಹಿರಿಯರಿಗೆ ನಮ್ಮಿಬ್ಬರನ್ನು ಬೇರ್ಪಡಿಸುವುದು ಬೇಡವೆಂದು ಬುದ್ಧಿಹೇಳಿ!'

ಅವರ ಪ್ರೀತಿಯನ್ನು ನೋಡಿ ನನ್ನ ಕಣ್ಣಲ್ಲಿ ನೀರಾಡಿತು.

ಇಲ್ಲಿ ಹಿರಿಯರ ಬಹುತ್ರಿಕೋನಗಳನ್ನು ಲೆಕ್ಕಿಸದೆ ಗಂಡಹೆಂಡತಿ ತಮ್ಮ ಭಾವಬಂಧವನ್ನು ಉಳಿಸಿಕೊಂಡಿದ್ದಾರೆ. ಅನ್ಯೋನ್ಯತೆ ಸಾಧಿಸುವತ್ತ ಹೆಜ್ಜೆ ಇಟ್ಟಿದ್ದಾರೆ. (ಇದೇ ಅನ್ಯೋನ್ಯತೆ ಅಲ್ಲವೆ ಎಂದು ಪ್ರಶ್ನಿಸುವವರಿಗೆ ಆಮೇಲೆ ಉತ್ತರಿಸುವೆ.) ಯಾಕೆಂದರೆ ಇಬ್ಬರಿಗೂ ತಮ್ಮ ಸ್ವಂತಿಕೆಯ ಅರಿವಿದ್ದು, ತಮಗೇನು ಬೇಕೆಂಬುದು ಸ್ಪಷ್ಟವಾಗಿದೆ. ಆದರೆ ಅನೇಕರಿಗೆ ಸ್ವಂತಿಕೆಯ ಅರಿವು ಸ್ಪಷ್ಟವಾಗಿರುವುದಿಲ್ಲ. ಆಗ ತ್ರಿಕೋನೀಕರಣಕ್ಕೆ ಸಿಕ್ಕ ದಾಂಪತ್ಯದ ಫಲಶ್ರುತಿ ಏನಾಗಬಹುದು ಎನ್ನುವುದಕ್ಕೆ ಒಂದು ಘಟನೆ ನನ್ನ ಮನದಲ್ಲಿ ಇನ್ನೂ ಹಸಿಯಾಗಿಯೇ ಇದೆ.

ಈ ಹುಡುಗಿಯ ತಾಯ್ತಂದೆಯರು ಬೇರೆಬೇರೆಯಾಗಿ ವಾಸಿಸುತ್ತಿದ್ದು ವರ್ಷಗಳೇ ಕಳೆದಿವೆ. ಸರ್ವಾಧಿಕಾರಿಣಿ ಅಮ್ಮನ ನೆರಳಲ್ಲಿ ಬೆಳೆಯುತ್ತ ಈಕೆ ಯಾರನ್ನೂ ಎದುರುಹಾಕಿಕೊಳ್ಳಲಿಕ್ಕೆ ಆಗದೆ 'ಸಂಘರ್ಷ ವಿಮುಖಿ' (**conflict avoidant**) ವರ್ತನೆಯನ್ನು ರೂಢಿಸಿಕೊಂಡಿದ್ದಾಳೆ. ಇತರರು ಈಕೆಯ ಮೇಲೆ ಒತ್ತಡ ತಂದರೆ ಒಂದೋ ಅದನ್ನು ತನಗಿಷ್ಟವಿಲ್ಲದಿದ್ದರೂ ಪಾಲಿಸುತ್ತಾಳೆ; ಅಥವಾ ಅದರಿಂದ ಪಲಾಯನ ಮಾಡುತ್ತಾಳೆ; ಆದರೆ ಯಾವೊತ್ತೂ ಸ್ಪಷ್ಟವಾಗಿ ನಿರಾಕರಿಸಿಲ್ಲ. ಸದಾ ಸೌಮ್ಯ ಮುಖಭಾವದ ಮರೆಯಲ್ಲಿ ಚಿಂದಿಯಾದ ಸ್ವಂತಿಕೆಯ ತುಣುಕುಗಳನ್ನು ಒಗ್ಗೂಡಿಸುವ ವ್ಯರ್ಥಪ್ರಯತ್ನ ಮಾಡುತ್ತ ಉಂಟಾಗುವ ವಿಷಣ್ಣತೆಯನ್ನು ಬಚ್ಚಿಟ್ಟುಕೊಳ್ಳುವಾಗ ನೀರಲ್ಲಿ ನೆನೆದ ಬೆಕ್ಕಿನ ತರಹ ಕಾಣುತ್ತಾಳೆ. ಇವಳನ್ನು ಸಾಹಸಿ ಹುಡುಗನೊಬ್ಬ ಮೆಚ್ಚಿದ್ದಾನೆ. ಇದು ಹುಡುಗಿಯ ತಂದೆಗೆ (ಆತ ಪಾರ್ಶ್ವವಾಯುವಿನಿಂದ ಹಾಸಿಗೆ ಹಿಡಿದು ಆರು ತಿಂಗಳಾಯಿತು) ಸಂತಸ ತಂದರೂ ತಾಯಿಗೆ ಸುತರಾಂ ಇಷ್ಟವಿಲ್ಲ. ಯಾಕೆ? ಆಕೆಗೆ ಐ.ಎ.ಎಸ್. ಅಧಿಕಾರಿ ಅಳಿಯನೇ ಬೇಕಂತೆ. ಹಾಗಾಗಿ ಇಬ್ಬರೂ ಓಡಿಹೋಗಿ ಮದುವೆಯಾಗಿದ್ದಾರೆ. ಎರಡು ತಿಂಗಳು ದಾಂಪತ್ಯ ನಡೆಸಿಕೊಂಡು ಆರಾಮವಾಗಿದ್ದ ಹುಡುಗಿಯನ್ನು ಸಹಿಸದೆ ತಾಯಿ ತಂತ್ರ ಹೂಡಿದ್ದಾಳೆ. ತನ್ನ ಗಂಡನನ್ನು ಸೇವೆಯ ನೆಪದಲ್ಲಿ ಮನೆಗೆ ಕರೆಸಿಕೊಂಡಿದ್ದಾಳೆ. ಮಗಳು ಮರಳದಿದ್ದರೆ ಅವಳ ಮೆಚ್ಚಿನ ತಂದೆಗೆ ತೊಂದರೆ ಕೊಡುವೆನೆಂದು ಬೆದರಿಕೆ ಒಡ್ಡಿದ್ದಾಳೆ. ಪರಿಣಾಮ? ಅಪ್ಪನ ಭೇಟಿಗೆಂದು ಬಂದವಳು ಅಲ್ಲೇ ಉಳಿದು, ಈ ದಾಂಪತ್ಯ ನಡೆಯಲಾರದು, ದಯವಿಟ್ಟು ಕ್ಷಮಿಸಿ ಎಂದು ಗಂಡನಿಗೆ ವಿನಂತಿಸಿಕೊಂಡಿದ್ದಾಳೆ. ಪಾಪ, ಗಂಡ ಅನಿವಾರ್ಯವಾಗಿ ದಾಂಪತ್ಯ ಮುರಿಯುತ್ತಿದ್ದಾನೆ.

ಸ್ವಂತಿಕೆ ಸಬಲವಾಗಿ ಇರದಿದ್ದರೆ ಏನಾಗುತ್ತದೆ ಅಂತ ಗೊತ್ತಾಯಿತಲ್ಲ?

ತ್ರಿಕೋನೀಕರಣದ ಪ್ರಭಾವವು ಆಪ್ತಸಲಹೆಗಾರರನ್ನೂ ಬಿಟ್ಟಿಲ್ಲ. ನಾನು ನಡೆಸುವ ಆಪ್ತಸಲಹೆಗಾರರಿಗೆ ತರಬೇತಿ ಕೊಡುವ ಕಾರ್ಯಾಗಾರವೊಂದರಲ್ಲಿ ಒಬ್ಬರು ನನ್ನ ಬಳಿ ಹೇಳಿಕೊಂಡಿದ್ದು ಹೀಗೆ: ಮಹಿಳೆಯೊಬ್ಬರು ತನ್ನ ಗಂಡನ ಮೊಬೈಲ್‌ನಲ್ಲಿದ್ದ ಸಂದೇಶಗಳನ್ನು ಕದ್ದು ಓದಿದಾಗ ಆತ ಅನ್ಯ ಮಹಿಳೆಯೊಂದಿಗೆ ಸಲಿಗೆಯಿಂದ ಇರುವ ವಿಷಯ ಗೊತ್ತಾಗಿದೆ. ಇದರ ಬಗೆಗೆ ಗಂಡನ ಜೊತೆಗೆ ಮಾತಾಡಿ ಈ ಸಮಸ್ಯೆಯನ್ನು ಕೊನೆಗಾಣಿಸಿ ಎಂದು ಆಪ್ತಸಲಹೆಗಾರರನ್ನು ಕೇಳಿಕೊಳ್ಳುತ್ತ, ತಾನು ಗಂಡನ ಮೊಬೈಲ್ ನೋಡಿದ್ದನ್ನು ಆತನಿಗೆ ತಿಳಿಸಕೂಡದು ಎಂದು ಅವರ ಹತ್ತಿರ ಭಾಷೆ ತೆಗೆದುಕೊಂಡಿದ್ದಾರೆ. ಈಗ ಸಮಸ್ಯೆ ಬಂದಿದ್ದು ನಮ್ಮ ಆಪ್ತಸಲಹೆಗಾರರಿಗೆ! ರಹಸ್ಯದ ಬಗೆಗೆ ಮಾತಾಡಬೇಕಂತೆ; ಆದರೆ ರಹಸ್ಯದ ಮೂಲದ ಬಗೆಗೆ ಬಾಯಿಬಿಡಬಾರದಂತೆ. ಇದನ್ನು ಹೇಗೆ ನಿಭಾಯಿಸುವುದು ಎನ್ನುವುದು ಒತ್ತಟ್ಟಿಗಿರಲಿ, ಇದು ಎಷ್ಟರ ಮಟ್ಟಿಗೆ ನೀತಿಸಂಹಿತೆಯನ್ನು ಪಾಲಿಸುತ್ತಿದೆ ಎಂಬುದು ಯೋಚಿಸಬೇಕಾದ ಸಂಗತಿ!

ನಾನು ಮಾಡುವ ದಾಂಪತ್ಯ ಚಿಕಿತ್ಸೆಯಲ್ಲೂ ತ್ರಿಕೋನೀಕರಣ ಇಣುಕಿದ್ದಿದೆ. ಉದಾಹರಣೆಗೆ, ಮೊನ್ನೆ ಆಪ್ತಸಲಹೆಗಾರರಿಗಾಗಿ ದಾಂಪತ್ಯಚಿಕಿತ್ಸೆಯ ತರಬೇತಿಯ ಕಾರ್ಯಾಗಾರದಲ್ಲಿ ಗಂಡಹೆಂಡತಿಯಾಗಿ ಅಭಿನಯಿಸುವ ಒಂದು ಜೋಡಿಗೆ ಚಿಕಿತ್ಸೆ ಕೊಡುವುದನ್ನು ತೋರಿಸಿಕೊಡುತ್ತಿದ್ದೆ. ಹೆಂಡತಿ ಅಡಿಗೆಮನೆಯನ್ನು ಅಸ್ತವ್ಯಸ್ತವಾಗಿ ಇಡುವಳೆಂದು ಗಂಡನ ಆರೋಪ, ಹಾಗೂ ಗಂಡ ಹೆಂಡತಿಯನ್ನು ಅರ್ಥಮಾಡಿಕೊಳ್ಳದೆ ಸದಾ ಟೀಕಿಸುತ್ತಾನೆ ಎಂದು ಹೆಂಡತಿಯ ಆರೋಪ. ಮೊದಲು ಗಂಡನ ಅಹವಾಲನ್ನು ಆಲಿಸಿ, ನಂತರ ಹೆಂಡತಿಯ ಕಡೆ ತಿರುಗಿದಾಗ ಆಕೆ ಅವನು ಹೇಳುತ್ತಿರುವುದೆಲ್ಲ ಸುಳ್ಳು ಎಂದು ಖಾರವಾಗಿ ಹೇಳಿದಳು. ಆಗ ನಾನು 'ಹೌದೆ?' ಎಂದೆ, ಅಷ್ಟೆ. ಹಾಗೆನ್ನುವಾಗ ನನ್ನ ಕತ್ತು ಒಂದು ಕ್ಷಣ ಸ್ವಲ್ಪ ಎಡಕ್ಕೆ ವಾಲಿದ್ದು ನನ್ನ ಗಮನಕ್ಕೆ ಬಂತು. ನಾನೇಕೆ ಕತ್ತು ಬಾಗಿಸಿದೆ ಎಂದು ಪ್ರೇಕ್ಷಕರನ್ನು ಕೇಳಿದೆ. ಅವರು ಯಾರೂ ಅದನ್ನು ಗಮನಿಸಿರಲಿಲ್ಲ. ಆಗ ನಾನೇ ವಿವರಿಸಿದೆ: ಗಂಡ ಹೇಳುತ್ತಿರುವುದೆಲ್ಲ ಸುಳ್ಳು ಎಂದು ಆಕೆ ಹೇಳುತ್ತಿರುವಾಗ ನನಗೆ ಆಕೆ ಸತ್ಯವನ್ನು ನಿರಾಕರಿಸುತ್ತಿದ್ದಾಳೆ ಎಂಬ ಅನಿಸಿಕೆ ಉಂಟಾಯಿತು. ಈ ಅನಿಸಿಕೆ ನನ್ನ ತಲೆಯಲ್ಲಿ ಹೇಗೆ ಬಂತು ಎಂದು ಯೋಚಿಸುವಾಗ ಹೊಳೆದದ್ದು ವಿಚಿತ್ರವಾಗಿತ್ತು: ಸ್ವತ: ನನ್ನ ಹೆಂಡತಿಯೇ ಅಡಿಗೆಮನೆಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳದಿದ್ದಾಗ ನಾನು ಆಕೆಯನ್ನು ಟೀಕಿಸಿದ್ದು, ಆಗ ಆಕೆ ಸುಳ್ಳು ಎಂದು ಸಾಧಿಸಿದ್ದು ನನ್ನ ಸುಪ್ತಮನಸ್ಸಿನಲ್ಲಿ ಅಚ್ಚಾಗಿತ್ತು. ಹಾಗಾಗಿ ನನಗರಿವಿಲ್ಲದೆ ತ್ರಿಕೋನೀಕರಣಕ್ಕೆ ಒಳಗಾಗಿ ಗಂಡನ ಪರವಾಗಿ ಹಾಗೂ ಹೆಂಡತಿಯ ವಿರೋಧವಾಗಿ ಯೋಚಿಸಿದ್ದೆ!

ತ್ರಿಕೋನೀಕರಣಕ್ಕೆ ಯಾರೂ ಹೊರತಲ್ಲ!

ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಕರೆಮಾಡಿ. ಲೇಖಕರ ವಿಳಾಸ: .www.medisex.org